ಸವಿ ಸವಿ ನೆನಪು..

# ಮೊದಲ 'ಟೇಕ್ ಆಫ್' ತಂದ ಪುಳಕ



ಗಗನಸಖಿಯರೊಡನೆ ಕಳೆದ ಆತ್ಮೀಯ ಕ್ಷಣ..

**ಬೆಂಗಳೂರಿನ ಎಚ್.ಎ.ಎಲ್. ವಿಮಾನ ನಿಲ್ದಾಣದಿಂದ ಹೊರಟು ಕಠ್ಮಂಡುವಿನ ತ್ರಿಭುವನ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದ ನೆಲವನ್ನು ಸ್ಪರ್ಶಿಸುವವರೆಗಿನ ಪ್ರತಿಯೊಂದು ಕ್ಷಣವನ್ನೂ ಖುಷಿಯಾಗಿ ಅನುಭವಿಸಿದೆ. ಆ ನೆನಪು ಇಂದಿಗೂ, ಎಂದೆಂದಿಗೂ ಅವಿಸ್ಮರಣೀಯ..!**

**■ ಎಚ್.ಎಸ್. ಶ್ರೀಮತಿ**

ಇತ್ತೀಚೆಗೆ ಭಾರತದ ಪ್ರಧಾನಮಂತ್ರಿಗಳು ಸಾಮಾನ್ಯ ಜನರಿಗೂ ವಿಮಾನಯಾನ ಕೈಗೆಟುಕುವ ದರದಲ್ಲಿ ಲಭ್ಯವಾಗಬೇಕು ಎನ್ನುವ ಉದ್ದೇಶದಿಂದ 'ಉಡಾಣ್' ಎನ್ನುವ ಹೊಸ ಯೋಜನೆಯನ್ನು ಲೋಕಾರ್ಪಣೆ ಮಾಡಿದರು. ಈ ಸಂದರ್ಭದಲ್ಲಿ ಅವರು ಹವಾಯಿ ಚಪ್ಪಲಿ ಹಾಕಿಕೊಂಡು ಓಡಾಡುವವರಿಗೂ ಹವಾ ಜಹಜಿನ ಪ್ರಯಾಣ ಲಭ್ಯವಾಗಬೇಕು ಎನ್ನುವುದು ಸರ್ಕಾರದ ಉದ್ದೇಶ ಎಂದು ಹೇಳಿದರು. ಆದರೆ ನಮ್ಮ ಬಾಲ್ಯ ಕಾಲದಲ್ಲಿ ಅಂದರೆ ಸುಮಾರು ಅರವತ್ತು ವರ್ಷಗಳ ಕೆಳಗೆ ವಿಮಾನಯಾನ ಅತ್ಯಂತ ವೈಭವದ ಸಂಗತಿಯಾಗಿತ್ತು. ನಾವು ಶಾಲೆಯಲ್ಲಿ ಓದುತ್ತಿದ್ದಾಗ ರೈಟ್ ಸಹೋದರರು ವಿಮಾನವನ್ನು ಕಂಡುಹಿಡಿದರು ಎನ್ನುವ ಮಾಹಿತಿ ಹಾಗೂ ಆಗೊಮ್ಮೆ ಈಗೊಮ್ಮೆ ಆಕಾಶದಲ್ಲಿ ಹಾರುತ್ತಿರುವ ವಿಮಾನದ ನೋಟ ಮಾತ್ರವೇ ದಕ್ಕುತ್ತಿದ್ದದ್ದು.

ಮಧ್ಯಮ ವರ್ಗದವರಿಗೆ ವಿಮಾನದಲ್ಲಿ ಪ್ರಯಾಣಿಸುವುದು ಊಹೆಗೂ ನಿಲುಕದ ಸಂಗತಿಯಾಗಿತ್ತು. ಆದರೆ ನನ್ನ ನಲವತ್ತೇಳನೇ ವರ್ಷದಲ್ಲಿ ಅಂದರೆ ಈಗ ಹದಿನೈದು ವರ್ಷಗಳ ಹಿಂದೆ ಮೊದಲ ವಿಮಾನಯಾನವನ್ನು ಕೈಗೊಳ್ಳುವ ಸದವಕಾಶ ನನಗೆ ಒದಗಿ ಬಂತು. ಅದು ಇಂದಿಗೂ ನನಗೆ ಸವಿನೆನಪೇ ಆಗಿದೆ.

ಪ್ರವಾಸವನ್ನೇ ತಮ್ಮ ಹವ್ಯಾಸವನ್ನಾಗಿಸಿಕೊಂಡಿರುವ ನನ್ನ ಚಿಕ್ಕಪ್ಪ 'ವಿಮಾನದಲ್ಲಿ ಪ್ರಯಾಣಿಸಬೇಕೆಂದು ನಿನಗೆ ಆಸಕ್ತಿಯಿದ್ದಲ್ಲಿ ನಾನು ಕರೆದುಕೊಂಡು ಹೋಗುತ್ತೇನೆ ಬಾ' ಎಂದು ಹೇಳಿದ್ದಲ್ಲದೆ ಬೆಂಗಳೂರಿನಿಂದ ನೇಪಾಳದ ಕಠ್ಮಂಡುವಿಗೆ ಒಂದು ಪ್ರವಾಸವನ್ನು ಏರ್ಪಡಿಸಿಯೇ ಬಿಟ್ಟರು. ಆಗ ಬುಧವಾರ ಹಾಗೂ ಭಾನುವಾರಗಳಂದು ಬೆಂಗಳೂರಿನಿಂದ ಕಠ್ಮಂಡುವಿಗೆ ನೇರ ವಿಮಾನಯಾನ ಲಭ್ಯವಿತ್ತು. ಫೆಬ್ರುವರು 13, 2002 ರಂದು ಮಧ್ಯಾಹ್ನ 12.15 ಗಂಟೆಗೆ ರಾಯಲ್ ನೇಪಾಳ್ ವಿಮಾನ ಸಂಸ್ಥೆಯ ಗಂಡಕಿ ಎನ್ನುವ ಹೆಸರಿನ ವಿಮಾನದ ಮೂಲಕ ನನ್ನ ಮೊದಲ ವಿಮಾನಯಾನ 'ಟೇಕ್ ಆಫ್' ಆಯಿತು. ವಿಮಾನದ ಒಳಗೆ ಹೋಗುತ್ತಿದ್ದಂತೆ ಗಗನಸಖಿಯರು ಸ್ವಾಗತವನ್ನು ಕೋರಿ ನಮ್ಮ ಆಸನಗಳನ್ನು ಹುಡುಕುವಲ್ಲಿ ನೆರವಾದರು. ಪ್ರಯಾಣಿಕರೆಲ್ಲಾ ಆಸೀನರಾದ ಮೇಲೆ ಪ್ರಯಾಣಿಕರು ವಹಿಸಬೇಕಿರುವ ಮುನ್ನೆಚ್ಚರಿಕೆಯನ್ನು ವಿವರಿಸಿ ಸೀಟ್ ಬೆಲ್ಟ್‌ಅನ್ನು ಹೇಗೆ ಕಟ್ಟಿಕೊಳ್ಳಬೇಕೆಂದು ತೋರಿಸಿಕೊಟ್ಟರು. ನಂತರ ತಂಪು ಪಾನೀಯವನ್ನು ನೀಡಿದರು. ವಿಮಾನದ ಶಬ್ದ ಹಾಗೂ ಚಲನೆಯ ಅನುಭವ ಸ್ವಲ್ಪವೂ ಗೊತ್ತಾಗುತ್ತಿರಲಿಲ್ಲ. ನಾನು ಗಗನಸಖಿಯರನ್ನೆಲ್ಲಾ ಪರಿಚಯ ಮಾಡಿಕೊಂಡು ಅವರ ಜೊತೆ ಭಾವಚಿತ್ರವನ್ನು ತೆಗೆಸಿಕೊಂಡೆ.

ಊಟದ ಸಮಯ ಸಮೀಪಿಸಿದ್ದರಿಂದ ಎಲ್ಲರಿಗೂ ಊಟವನ್ನು ಹಂಚಿದರು. ಊಟ ಸೌತೆಕಾಯಿ ಮತ್ತು ಕ್ಯಾರೆಟ್‌ನ ಸಣ್ಣ ಚೂರುಗಳು, ಎರಡು ಪೂರಿ ಹಾಗೂ ಗಟ್ಟಿಯಾದ ಸಾಗು, ಒಂದು ಪುಟ್ಟ ಬಟ್ಟಲು ಪಲಾವ್ ಮತ್ತು ರಸಮಲಾಯ್‌ಗಳನ್ನು ಒಳಗೊಂಡಿತ್ತು.

ವಿಮಾನ ಸಾಗುತ್ತಿದ್ದಂತೆ ಕಿಟಕಿಯ ಮೂಲಕ ಕೆಳಗೆ ನೋಡಿದಾಗ ಹರಿಯುತ್ತಿರುವ ನೀರು, ಶೀಟಿನಿಂದ ಕಟ್ಟಿದ ಮನೆ ಮುಂತಾದವುಗಳ ಮೇಲೆ ಬಿದ್ದ ಬಿಸಿಲು ಪ್ರತಿಫಲನಗೊಂಡು ಚಿನ್ನದಂತೆ ಮಿಂಚುತ್ತಿತ್ತು. ಇಷ್ಟಾಗುವ ಹೊತ್ತಿಗೆ ನಾವು ನಮ್ಮ ಗಮ್ಯವನ್ನು ಸಮೀಪಿಸಿದ್ದೆವು. ಭೂಮಿಯನ್ನು ಸ್ಪರ್ಶಿಸುವ ಮೊದಲು ಮತ್ತೊಮ್ಮೆ ಎಲ್ಲರಿಗೂ ತಂಪು ಪಾನೀಯವನ್ನು ವಿತರಿಸಲಾಯಿತು. ನಾನಂತು ಬೆಂಗಳೂರಿನ ಎಚ್.ಎ.ಎಲ್. ವಿಮಾನ ನಿಲ್ದಾಣದಿಂದ ಹೊರಟು ಕಠ್ಮಂಡುವಿನ ತ್ರಿಭುವನ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದ ನೆಲವನ್ನು ಸ್ಪರ್ಶಿಸುವವರೆಗಿನ ಪ್ರತಿಯೊಂದು ಕ್ಷಣವನ್ನೂ ಖುಷಿಯಾಗಿ ಅನುಭವಿಸಿದೆ.

ನಾವು ಪ್ರವಾಸವನ್ನು ಕೈಗೊಂಡ ಸಮಯದಲ್ಲಿ, ನೇಪಾಳ ಜೂನ್ 1, 2001ರಂದು ಸಂಭವಿಸಿದ್ದ ರಾಜ ಪರಿವಾರದ ಹತ್ಯಾಕಾಂಡದಿಂದ ತತ್ತರಿಸಿ ಹೋಗಿತ್ತು. ದೊರೆ ಬೀರೇಂದ್ರ ಹಾಗೂ ರಾಣಿ ಐಶ್ವರ್ಯ ತಮ್ಮ ಸ್ವಂತ ಮಗ ಧೀರೇಂದ್ರನ ಬಂದೂಕಿನ ಏಟಿಗೆ ಬಲಿಯಾಗಿದ್ದರು. ರಾಜ ಪರಿವಾರದ ಒಟ್ಟು ಹತ್ತು ಸದಸ್ಯರು ಪ್ರಾಣ ಕಳೆದುಕೊಂಡಿದ್ದರು. ಈ ಹತ್ಯಾಕಾಂಡದಿಂದಾಗಿ ನೇಪಾಳದ ಪ್ರವಾಸೋದ್ಯಮ ನೆಲ ಕಚ್ಚಿತ್ತು. ವಿಮಾನ ಸಂಸ್ಥೆ ಹಾಗೂ ಹೋಟೆಲ್‌ಗಳು ಪ್ರವಾಸಿಗರನ್ನು ಆಕರ್ಷಿಸುವುದಕ್ಕಾಗಿ ಕಡಿಮೆ ದರದಲ್ಲಿ ಸೇವೆ ನೀಡುವುದಕ್ಕೆ ಸಿದ್ಧವಾಗಿದ್ದವು. ಹೀಗಾಗಿ ನಮಗೆ ಹದಿನಾರು ಸಾವಿರ ರೂಪಾಯಿಗಳಷ್ಟು ಕಡಿಮೆ ವೆಚ್ಚದಲ್ಲಿ ವಿಮಾನ ಯಾನ, ಐದು ಹಗಲು ನಾಲ್ಕು ರಾತ್ರಿಗಳ ಪಂಚತಾರಾ ಹೋಟೆಲ್ (ಹೋಟೆಲ್ ಯಾಕ್ ಅಂಡ್ ಏತಿ) ವಾಸ್ತವ್ಯ ಹಾಗೂ ಸ್ಥಳೀಯ ಪ್ರವಾಸಿ ತಾಣಗಳ ಭೇಟಿಗಳನ್ನು ಒಳಗೊಂಡ ಪ್ರವಾಸ ಲಭ್ಯವಾಗಿತ್ತು.

ನಂತರದ ವರ್ಷಗಳಲ್ಲಿ ಕೋಲ್ಕತ್ತ, ದೆಹಲಿ, ಶ್ರೀನಗರ ಮುಂತಾದ ಸ್ಥಳಗಳಿಗೆ ವಿಮಾನ ಪ್ರಯಾಣ ಕೈಗೊಂಡರೂ ನೇಪಾಳದ ಪ್ರವಾಸಕ್ಕಾಗಿ ಕೈಗೊಂಡ ವಿಮಾನಯಾನದ ನೆನಪು ಇಂದಿಗೂ ಮನಸ್ಸಿಗೆ ಮುದವನ್ನು ನೀಡುತ್ತದೆ. ಮೊದಲ ವಿಮಾನಯಾನದ ಟಿಕೆಟ್ ಹಾಗೂ ಬೋರ್ಡಿಂಗ್ ಪಾಸ್‌ಗಳನ್ನು ಈಗಲೂ ನನ್ನ ಬಳಿ ಇಟ್ಟುಕೊಂಡಿದ್ದೇನೆ. ■

